# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 374

ಸದಸ್ಯರ ಹೆಸರು : ಶ್ರೀ ಕೆ.ಹರೀಶ್ ಕುಮಾರ್

(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 19.02.2024

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಕ್ಷರ ದಾಸೋಹ ಯೋಜನೆಯಡಿ ಬಿಸಿಯೂಟ ತಯಾರಕ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ನಾಲ್ಕು ಗಂಟೆ ಕಾರ್ಯನಿರ್ವಹಣೆ ಸಮಯ ನಿಗದಿ ಮಾಡಿದ್ದಾಗಿಯೂ ಹೆಚ್ಚುವರಿಯಾಗಿ ದುಡಿಸಿಕೊಳ್ಳುತ್ತಿದ್ದು ಕನಿಷ್ಠ ವೇತನವನ್ನು ಪಾವತಿಸದೆ ವೇತವನ್ನು ಕ್ಲಿಷ್ಟ ಸಮಯಕ್ಕೂ ನೀಡದೇ ಇರುವುದರಿಂದ ಬಿಸಿಯೂಟ ತಯಾರಕ ಕಾರ್ಮಿಕರ ಸ್ಥಿತಿ ದುಸ್ತರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಧ್ಯಾಹ್ನ ಉಪಹಾರ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅನುಷ್ಠಾನ ಮಾಡಲಾಗುತ್ತಿದೆ.<br><br>ಮಧ್ಯಾಹ್ನ ಉಪಹಾರ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಅಡುಗೆ ಸಿಬ್ಬಂದಿಗಳಿಗೆ ಮಾಸಿಕ ರೂ 3700/- ಹಾಗೂ ಸಹಾಯಕ ಅಡುಗೆ ಸಿಬ್ಬಂದಿಗಳಿಗೆ ಮಾಸಿಕ ರೂ 3600/- ಗೌರವಧನವನ್ನು ಪಾವತಿಸಲಾಗುತ್ತಿದ್ದು, ಸದರಿ ಅಡುಗೆ ಸಹಾಯಕರು ಶಾಲೆಗಳಲ್ಲಿ ಕರಾರಿನ ಮೇರೆಗೆ ದಿನವೊಂದರಲ್ಲಿ ಅಲ್ಪಾವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರಣ, ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳನ್ವಯ ದಿನವೊಂದರಲ್ಲಿ ನಿಗದಿಪಡಿಸಲಾಗಿರುವ ಅವಧಿಗೆ ಕರ್ತವ್ಯವನ್ನು ನಿರ್ವಹಿಸಿರುವುದಿಲ್ಲ.<br><br>ಕರ್ನಾಟಕ ಕನಿಷ್ಠ ವೇತನ ನಿಯಮಗಳು-1958ರಲ್ಲಿ ನಿಗದಿಪಡಿಸಿರುವಂತೆ ವಯಸ್ಕರು ಒಂದು ದಿನದಲ್ಲಿ 09 ಗಂಟೆಗಳ ಕಾಲ ಕೆಲಸ ನಿರ್ವಹಿಸಿದಲ್ಲಿ ಒಂದು ದಿನದ ಕರ್ತವ್ಯ ನಿರ್ವಹಿಸಿದಂತಾಗುತ್ತದೆ. ಆದರೆ ಅಡುಗೆ ಸಹಾಯಕರು ಶಾಲೆಗಳಲ್ಲಿ ಒಂದು ದಿನಕ್ಕೆ 09 ಗಂಟೆಗಳ ಕಾಲ ಕರ್ತವ್ಯ ನಿರ್ವಹಿಸದ ಕಾರಣ ಕನಿಷ್ಠ ವೇತನ ಕಾಯ್ದೆಯ ವ್ಯಾಪ್ತಿಗೆ ಒಳಪಡುವುದಿಲ್ಲ.<br><br>ಗೌರವಾನ್ವಿತ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 6926/2018ರಲ್ಲಿ ದಿನಾಂಕ: 10-08-2022ರಂದು ನೀಡಿರುವ ತೀರ್ಪಿನಲ್ಲಿ ಕರ್ನಾಟಕ ಕನಿಷ್ಠ ವೇತನ ನಿಯಮಗಳು-1958 ರನ್ವಯ ದಿನವೊಂದರ ಸೇವೆಯನ್ನು ಪರಿಗಣಿಸಲು ವಯಸ್ಕರಿಗೆ ನಿಗದಿಪಡಿಸಲಾಗಿರುವ 09 ಗಂಟೆಗಳ ಕೆಲಸದ ಅವಧಿಯ ಮಾನದಂಡವನ್ನು ಅಡುಗೆ ಸಹಾಯಕರು ಪೂರೈಸದ ಕಾರಣ ಕನಿಷ್ಠ ವೇತನ ಕಾಯ್ದೆಯ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ.<br><br>ಅಡುಗೆ ಸಿಬ್ಬಂದಿಗಳು ಕನಿಷ್ಠ ವೇತನ ಕಾಯ್ದಿಯ ವ್ಯಾಪ್ತಿಗೆ ಒಳಪಡದೇ ಇರುವುದರಿಂದ ಕನಿಷ್ಠ ವೇತನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.<br><br>ಆದಾಗ್ಯೂ ರಾಜ್ಯ ಸರ್ಕಾರದಿಂದ ಆರ್ಥಿಕ ಸ್ಥಿತಿಗತಿಗಳನ್ನು ಆಧರಿಸಿ ಕಾಲಕಾಲಕ್ಕೆ ಅಡುಗೆ ಸಹಾಯಕರ ಗೌರವ ಸಂಭಾವನೆಯನ್ನು ಹೆಚ್ಚಿಸಲಾಗಿದೆ. |
| ಆ) | ಬಂದಿದ್ದಲ್ಲಿ ಈ ಕುರಿತಂತೆ ಸರ್ಕಾರ ಕೈಗೊಂಡ ಕ್ರಮಗಳೇನು (ವರದಿ ನೀಡುವುದು) | |

ಇಪಿ 14 ಎಂಎಂಎಸ್ 2024

(ಎಸ್.ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.